3.ವಿತ್ತೀಯ ಕಾರ್ಯಕಲಾಪ

2008–09ನೇ ಸಾಲಿನ ಪೂರದ ಅಂದಾಜುಗಳ ಮಂಡನೆಗೆ ಅನುಮತಿ ಕೋರಿಕೆ

ಅಧ್ಯಕ್ಷರು: 2008–09ನೇ ಸಾಲಿನಳ ಪೂರಕ ಅಂದಾಜುಗಳನ್ನು (ಮೊದಲನೇ ಕಂತು) ಮಂಡಿಸುವುದು.

ಶ್ರೀ ಬಿ.ಎಸ್.ಯಡಿಯೂರಪ್ಪ: 2008–09ನೇ ಸಾಲಿನ ಪೂರಕ ಅಂದಾಜುಗಳು(ಮೊದಲನೇ ಕಂತು) ಮಂಡಿಸುತ್ತೇನೆ.

ಅಧ್ಯಕ್ಷರು: ಮಂಡಿಸಲಾಯಿತು.

(ಅನುಬಂಧ–I)

4. 2008–09ನೇ ಸಾಲಿನ ಆಯವ್ಯಯ ಅಂದಾಜುಗಳ ಮೇಲೆ ಸಾಮಾನ್ಯ ಚರ್ಚೆ

ಅಧ್ಯಕ್ಷರು: ಈಗ ಆಯವ್ಯಯದ ಮೇಲಿನ ಚರ್ಚೆ. ಮಾನ್ಯ ಮಹದೇವ್‌ಪ್ರಸಾದ್‌ರವರೆ ನಿನ್ನೆ ಅರ್ಧಕ್ಕೆ ನಿಲ್ಲಿಸಿದ್ದೀರಿ. ಈಗ ಅದನ್ನು ಮುಂದುವರಿಸಿ. ಆದಷ್ಟು 15 ನಿಮಿಷಗಳಲ್ಲಿ ಮುಗಿಸಿ. ಬಹಳಷ್ಟು ಜನ ಮಾನ್ಯ ಸದಸ್ಯರುಗಳು ಮಾತನಾಡುವವರಿದ್ದಾರೆ. ಎಲ್ಲರೂ ಬೇಗ ಬೇಗ ಮುಗಿಸಿದರೆ ಎಲ್ಲಾ ಸದಸ್ಯರಿಗೂ ಅವಕಾಶ ಸಿಗುತ್ತದೆ.

ಶ್ರೀ ಹೆಚ್.ಎಸ್.ಮಹದೇವಪ್ರಸಾದ್ (ಗುಂಡ್ಲುಪೇಟೆ):ನಿನ್ನೆ ಪ್ರಾರಂಭ ಮಾಡಿದಂಥ ಚರ್ಚೆಯನ್ನು ಮುಂದುವರೆಸಲು ಅವಕಾಶ ಮಾಡಿ ಕೊಟ್ಟಿದ್ದಕ್ಕೆ ತಮಗೆ ವಂದಿಸುತ್ತೇನೆ. ಈಗಾಗಲೇ ಕೃಷಿ ಇಲಾಖೆಯ ಬಗ್ಗೆ ನಿನ್ನೆ ಸಾಕಷ್ಟು ವಿಚಾರಗಳನ್ನು ಸದನಕ್ಕೆ ತಮ್ಮ ಮೂಲಕ ತರತಕ್ಕ ಪ್ರಯತ್ನವನ್ನು ಮಾಡಿದ್ದೇನೆ. ಏನಾಗಿದೆಯೆಂದರೆ, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣದ ವಿಚಾರದಲ್ಲಿ ಏನು ಮಾನ್ಯ ಮುಖ್ಯಮಂತ್ರಿಯವರು ಮುಂಗಡ ಪತ್ರದಲ್ಲಿ ಪ್ರಸ್ತಾಪ ಮಾಡಿದ್ದಾರೆ, ವಯಸ್ಕರ ಶಿಕ್ಷಣ ಇಲಾಖೆಯೇನಿದೆ ಅದರ ಬಗ್ಗೆ ಯಾವುದೇ ವಿಚಾರವನ್ನು ಅವರ ಬಜೆಟ್‌ನಲ್ಲಿ ಪ್ರಸ್ತಾಪ ಮಾಡಿಲ್ಲ. ನಮ್ಮಲ್ಲಿ ಇನ್ನು 40–48 ಪರ್ಸೆಂಟ್ ಅನಕ್ಷರಸ್ಥರು ಇರುವ ಸ್ಥಿತಿಯಲ್ಲಿ ಅವರನ್ನು ಅಕ್ಷರಸ್ಥರನ್ನಾಗಿ ಮಾಡತಕ್ಕ ಕೆಲಸ 1987ರಿಂದ ನಿರಂತರವಾಗಿ ನಡೆಯುತ್ತಾ ಬಂದಿದೆ. ಕಲಿಕಾ ಕೇಂದ್ರವನ್ನು ಮುಂದುವರೆದ ಶಿಕ್ಷಣ ಕೇಂದ್ರವನ್ನು ಗ್ರಾಮಾಂತರ ಪ್ರದೇಶದಲ್ಲಿ ಪಂಚಾಯಿತಿ ಮಟ್ಟದಲ್ಲಿ ಕಾರ್ಯನಿರ್ವಹಿಸುತ್ತಿವೆ. ಅವರಿಗೆ ಸರಿಯಾದ ಸಂಪನ್ನೂಲವನ್ನು ಒದಗಿಸದಿರುವ ಕಾರಣ ಅವುಗಳೆಲ್ಲ ಆಗಾಗ್ಗೆ ಸ್ಥಗಿತವಾಗಿರುವುದನ್ನು ಕಾಣುತ್ತಿದ್ದೇವೆ. ಈ ರೀತಿಯಲ್ಲಿ ವಯಸ್ಕರ ಶಿಕ್ಷಣಕ್ಕೆ ಒಂದು ನಿರ್ದೇಶಾನಾಲಯವೂ ಇದ್ದು ಒಬ್ಬ ಐ.ಎ.ಎಸ್. ಅಧಿಕಾರಿ ಕಾರ್ಯನಿರ್ವಹಿಸುತ್ತಿದ್ದರೂ ಅದಕ್ಕೆ ಈ ಬಜೆಟ್‌ನಲ್ಲಾಗಲಿ ಅಥವಾ ಅವರ ಶಿಕ್ಷಣ ಇಲಾಖೆಯ ಯಾವುದೇ ಕಾರ್ಯಕ್ರಮದಲ್ಲಾಗಲಿ ಅನುದಾನವನ್ನು ಒದಗಿಸತಕ್ಕ